ಕರ್ನಾಟಕ ವಿಧಾನ ಸಭೆ ...
KARNATAKA LEGISLATIVE ASSEMBLY ...

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಶಾಸಕರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 21/11/2019

# ರಮೇಶ್‌ಕುಮಾರ್ ಕ್ರಿಮಿನಲ್ ಸ್ಪೀಕರ್

ಬೆಂಗಳೂರು: 17 ಶಾಸಕರನ್ನು ಅನರ್ಹಗೊಳಿಸಿದ ರಮೇಶ್‌ಕುಮಾರ್ ಒಬ್ಬ ಕ್ರಿಮಿನಲ್ ಸ್ಪೀಕರ್ ಎಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಟೀಕಾಪ್ರಹಾರ ನಡೆಸಿದ್ದಾರೆ. ಬಹುಶಃ ಇಂತಹ ವಿಕೃತ ಮನಸ್ಸಿನ ಸ್ಪೀಕರ್‌ರನ್ನು ರಾಜ್ಯ ಎಂದೂ ಕಂಡಿಲ್ಲ, 17 ಶಾಸಕರ ಭವಿಷ್ಯ ಹಾಳು ಮಾಡಿದರು ಎಂದು ಸುದ್ದಿಗಾರರಿಗೆ ತಿಳಿಸಿದರು. ಸಿದ್ದರಾಮಯ್ಯ ಸಿಎಂ ಆಗಿ ಕಾಂಗ್ರೆಸ್ ಹೀನಾಯ ಸ್ಥಿತಿ



ತಲುಪಿದೆ. ಕೈ ನಾಯಕರೇ ಸಿದ್ದರಾಮಯ್ಯ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇಬ್ಬರ ನಡುವೆ ಕಾದಿ ಬೇಡಿ ಪ್ರತಿಪಕ್ಷ ನಾಯಕರಾಗಿದ್ದಾರೆ ಎಂದು ಲೇವಡಿ ನಡೆಸಿದರು. ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಭವಿಷ್ಯ ಇಲ್ಲ. ಮುಂದೆ ಹಲವರು ಬಿಜೆಪಿಗೆ ಬರಲು ತುದಿಗಾಲಲ್ಲಿ ನಿಂತಿದ್ದಾರೆ. ಅಧಿಕಾರ ಕಳೆದುಕೊಂಡ ಎಚ್.ಡಿ.ಕುಮಾರಸ್ವಾಮಿ ಮಾನಸಿಕ ಅಸ್ವಸ್ಥರಾಗಿ ಹತಾಶರಾಗಿದ್ದಾರೆ ಎಂದು ಜರಿದರು. 15 ಕ್ಷೇತ್ರಗಳ ಅಭ್ಯರ್ಥಿಗಳನ್ನು ಗೆಲ್ಲಿಸುವುದು, ಸೋಲಿಸುವುದು ಕ್ಷೇತ್ರದ ಮತದಾರರು. ಚುನಾವಣೆ ಬಳಿಕ ಜೆಡಿಎಸ್ ಅಡ್ರೆಸ್ಸೇ ಇರಲ್ಲ ಎಂದು ವ್ಯಂಗ್ಯವಾಡಿದರು.